# ಶಿಕ್ಷಣದ ಮೂಲಭೂತ ಹಕ್ಕಿಗಾಗಿ ಜನಾಂದೋಲನಗಳ ಸಮನ್ವಯ [ಫಾಪ್ರೆ]

# PEOPLES ALLIANCE FOR FUNDAMENTAL RIGHT TO EDUCATION (PAFRE)

# ಜಾತಿ-ಧರ್ಮ-ದ್ವೇಷ ಸಾಕು ಶಿಕ್ಷಣದ ಮೂಲಭೂತ ಹಕ್ಕು ಬೇಕು

**ರಾಜಕೀಯ ಪಕ್ಷಗಳಿಗೆ ಹಕ್ಕೊತ್ತಾಯ ಪತ್ರ**

**2023ರ ವಿಧಾನ ಸಭಾ ಚುನಾವಣೆಗೆ ರಾಜಕೀಯ ಪಕ್ಷಗಳ ಪ್ರಣಾಳಿಕೆಯಲ್ಲಿ ನಮ್ಮ ಶಾಲಾ ಶಿಕ್ಷಣದ ಬೇಡಿಕೆಗಳು**

ಆತ್ಮೀಯ ಮೇಡಂ/ಸರ್,

ಶಿಕ್ಷಣದ ಮೂಲಭೂತ ಹಕ್ಕಿಗಾಗಿ ಜನಾಂದೋಲನಗಳ ಸಮನ್ವಯ - ಫಾಫ್ರೆಯು, ಶಿಕ್ಷಣದ ಮೂಲಭೂತ ಹಕ್ಕನ್ನು ಸಾಕಾರಗೊಳಿಸಲು ಕಾರ್ಯನಿರ್ವಹಿಸುತ್ತಿರುವ ಒಂದು ಜನಾಂದೋಲನಗಳ ಸಮನ್ವಯವಾಗಿದೆ. ಈ ಸಮನ್ವಯದ ಸದಸ್ಯರಾದ ನಾವು, ರಾಜ್ಯವ್ಯಾಪಿ ಆಂದೋಲನದ ಭಾಗವಾಗಿ ಗರ್ಭದಿಂದ 18 ವರ್ಷದೊಳಗಿನ ಎಲ್ಲಾ ಮಕ್ಕಳಿಗೆ ಉತ್ತಮ ಆರೈಕೆಯನ್ನು ಒಳಗೊಂಡಂತೆ ಆರೋಗ್ಯ, ಪೋಷಣೆ ಹಾಗು ಚಿಕ್ಕ ಮಕ್ಕಳಲ್ಲಿ ಇಂದ್ರಿಯ ಸಂವೇದನಾ ಅಭಿವೃದ್ಧಿಯನ್ನು ಉತ್ತೇಜಿಸಲು ಬಾಲ್ಯದ ಆರಂಭಿಕ ಅವಕಾಶಗಳು ಮತ್ತು ಸುಸ್ಥಿರ ಮಾನವ ಅಭಿವೃದ್ಧಿಗೆ ಪೂರಕವಾದ ಸಮಾನ ಗುಣಮಟ್ಟದ ಸಮಾನ ಶಿಕ್ಷಣದ ವಿಷಯನ್ನು ಮುಂಬರುವ 2023 ರ ವಿಧಾನ ಸಭಾ ಚುನಾವಣೆಯಲ್ಲಿ ಒಂದು ಪ್ರಮುಖ ರಾಜಕೀಯ ಕಾರ್ಯಸೂಚಿಯಾಗಬೇಕೆಂಬ ಸದುದ್ದೇಶವನ್ನು ಹೊಂದಿದ್ದೇವೆ.

ಶಿಕ್ಷಣವನ್ನು ಕೇವಲ ಪ್ರಣಾಳಿಕೆಯಲ್ಲಿ ಭರವಸೆಯನ್ನಾಗಿ ಘೋಷಿಸುವ ಬದಲು, ಅದನ್ನು ಒಂದು ಖಚಿತ ವಾಗ್ದಾನವಾಗಿ ಕೊಟ್ಟು , ಚುನಾವಣೆಯ ನಂತರ ಅದನ್ನು ಈಡೇರಿಸುವ ಬದ್ಧತೆ ಮೆರೆಯುವ ಪಕ್ಷಗಳಿಗೆ ಈ ಬಾರಿ ಮತಚಲಾಯಿಸುವಂತೆ ಜಾಗೃತಿ ಮೂಡಿಸುವುದು ಈ ಅಭಿಯಾನದ ಮೂಲ ಉದ್ದೇಶವಾಗಿದೆ. ಜೊತೆಗೆ, ಮಕ್ಕಳ ಪಾಲಕರಾಗಿರುವ ನಾವು, ನಮ್ಮ ಮಕ್ಕಳ ನ್ಯಾಯಬದ್ಧ ಮೂಲಭೂತ ಶಿಕ್ಷಣದ ಹಕ್ಕನ್ನು ಎತ್ತಿಹಿಡಿಯಲು "ಈ ಬಾರಿ ನಮ್ಮ ಮತ ಗುಣಾತ್ಮಕ ಸಾರ್ವಜನಿಕ ಶಿಕ್ಷಣ ವ್ಯವಸ್ಥೆಗಾಗಿ (Vote for Quality Public Education System) ಎಂಬ ವಿಷಯದೊಂದಿಗೆ ಚುನಾವಣೆಯಲ್ಲಿ ಪಾಲ್ಗೊಂಡು ನಮ್ಮ ಮತ ಚಲಾಯಿಸಲು ನಿರ್ಧರಿಸಿದ್ದೇವೆ .

ಈ ರಾಜ್ಯ ಆಂದೋಲನದ ಮುಂದಾಳತ್ವವನ್ನು ಶಿಕ್ಷಣದ ಮೂಲಭೂತ ಹಕ್ಕಿಗಾಗಿ ಜನಾಂದೋಲನಗಳ ಸಮನ್ವಯ (ಫಾಫ್ರೆ) ಮುನ್ನೆಡೆಸುತ್ತಿದೆ. ಈ ಕೆಳಗಿನ ಅಂಶಗಳನ್ನು ನಿಮ್ಮ ಪಕ್ಷದ ಚುನಾವಣಾ ಪ್ರಣಾಳಿಕೆಯಲ್ಲಿ ರಾಜಿಯಿಲ್ಲದ ಬದ್ಧತೆಯ ಖಾತರಿ ವಿಷಯವನ್ನಾಗಿ ಸೇರಿಸಬೇಕೆಂದು ನಾವು ಆಗ್ರಹಿಸುತ್ತೇವೆ. ಚುನಾವಣೆಯ ನಂತರ ಈ ಅಂಶಗಳನ್ನು ಈಡೇರಿಸುವ ರಾಜಕೀಯ ಬದ್ಧತೆಗೂ ಸಹ ನಾವು ಒತ್ತಾಯಿಸುತ್ತೇವೆ .

## ನಮ್ಮ ಹಕ್ಕೊತ್ತಾಯಗಳು

- ಅಂಗವಿಕಲ ಮಕ್ಕಳು ಸೇರಿದಂತೆ ಎಲ್ಲಾ ಮಕ್ಕಳ ಕಲಿಕೆಗೆ ಒತ್ತು ನೀಡುವ ಮೂಲಕ ಸಂವಿಧಾನದಲ್ಲಿನ ಮೂಲಭೂತ ಹಕ್ಕಾಗಿರುವ 21ಎ ನ್ನು ಕೊಡಮಾಡುವ ಶಿಕ್ಷಣ ಹಕ್ಕು ಕಾಯಿದೆಯನ್ನು ಸಮರ್ಪಕವಾಗಿ ಹಾಗು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಹಾಗು ನಿಗದಿತ ಸಮಯದಲ್ಲಿ ಎಲ್ಲಾ ಮೂಲಭೂತ ಸೌಕರ್ಯ ಒದಗಿಸಲು ನಮ್ಮ ಪಕ್ಷವು ಬದ್ಧವಾಗಿದೆ.
- ಎಲ್ಲಾ ವಿದ್ಯಾರ್ಥಿಗಳಿಗೆ ಸಕಾಲದಲ್ಲಿ ಪಠ್ಯಪುಸ್ತಕ, ನೋಟ್ ಪುಸ್ತಕ, ಸಮವಸ್ತ್ರ , ಷೂ-ಸಾಕ್ಸ್, ಬೈಸಿಕಲ್, ವಿದ್ಯಾರ್ಥಿವೇತನ , ಇತ್ಯಾದಿಗಳನ್ನು ಒದಗಿಸಲು ನಮ್ಮ ಪಕ್ಷವು ಬದ್ಧವಾಗಿದೆ.
- ಯಾವುದೇ ನೆಪಹೇಳಿ ಸರ್ಕಾರಿ ಶಾಲೆಗಳನ್ನು ಸಾಮೂಹಿಕವಾಗಿ ಮುಚ್ಚುವ/ ವಿಲೀನಗೊಳಿಸುವ ಪ್ರಕ್ರಿಯೆಯನ್ನು ಪೂರ್ಣವಾಗಿ ನಿಲ್ಲಿಸಲು ನಮ್ಮ ಪಕ್ಷವು ಬದ್ಧವಾಗಿದೆ.
- ಬಾಲ್ಯಪೂರ್ವ ಆರೈಕೆ ಮತ್ತು ಶಿಕ್ಷಣವೂ ಒಳಗೊಂಡಂತೆ ಕನಿಷ್ಠ 12ನೆಯ ತರಗತಿಯವರೆಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ವಿಸ್ತರಿಸಲು ಸಂವಿಧಾನ ಹಾಗು ಶಿಕ್ಷಣಹಕ್ಕು ಕಾಯಿದೆಗೆ ಅಗತ್ಯ ತಿದ್ದುಪಡಿ ತರಲು ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಲು ನಮ್ಮ ಪಕ್ಷವು ಬದ್ಧವಾಗಿದೆ.
- ಅನಗತ್ಯ ಪರೀಕ್ಷೆಗಳನ್ನು ನಡೆಸುವ ಬದಲು, ವ್ಯಾಪಕ ಹಾಗು ನಿರಂತರ ಮೌಲ್ಯಮಾಪನದ(ಸಿಸಿಇ) ಆಧಾರದಲ್ಲಿ ಮಕ್ಕಳ ಕಲಿಕೆಯನ್ನು ಶಾಲಾ ಹಂತದಲ್ಲಿ ಸಿಸಿಇ ಅನ್ವಯ ಮೌಲ್ಯಾಂಕನ ಮಾಡಿ ಪ್ರಭುತ್ವದ ಮಟ್ಟಕ್ಕೆ ಕಲಿಸಲು ಎಲ್ಲಾ ಅಗತ್ಯ ಕ್ರಮ ವಹಿಸಲು ನಮ್ಮ ಪಕ್ಷವು ಬದ್ಧವಾಗಿದೆ

- 2017ರ ಸಬಲೀಕರಣ ವರದಿಯ ಶಿಫಾರಸ್ಸಿನಂತೆ, ಹಂತ ಹಂತವಾಗಿ ಗ್ರಾಮ ಮಟ್ಟದಲ್ಲಿ ಪೂರ್ವ-ಪ್ರಾಥಮಿಕದಿಂದ ನಾಲ್ಕನೇ ತರಗತಿಯವರೆಗೆ ಸಾರ್ವಜನಿಕ ಬುನಾದಿ ನೆರೆಹೊರೆಯ ಪ್ರಾಥಮಿಕ ಶಾಲೆ (Public Foundational Neighbourhood Primary School) ಹಾಗು ಪಂಚಾಯತಿ/ವಾರ್ಡ್ ಮಟ್ಟದಲ್ಲಿ ಪೂರ್ವ-ಪ್ರಾಥಮಿಕದಿಂದ 12ನೇ ತರಗತಿಯವರೆಗೆ ಸಾರ್ವಜನಿಕ ನೆರೆಹೊರೆಯ ಹಗಲು/ಸನಿವಾಸ ಶಾಲೆಗಳ (Public Neighbourhood Day/Residential School) ಮೂಲಕ ಸಮಾನ ಗುಣಮಟ್ಟದ ಸಮಾನ ಶಾಲಾ ಶಿಕ್ಷಣವನ್ನು ಹಂತ ಹಂತವಾಗಿ ಜಾರಿಗೊಳಿಸಲು ನಮ್ಮ ಪಕ್ಷವು ಬದ್ಧವಾಗಿದೆ
- ಸರ್ಕಾರೇತರ ಅನುದಾನರಹಿತ ಶಾಲೆಗಳಲ್ಲಿ ಮಕ್ಕಳ-ಪಾಲಕರ ಹಿತ ಕಾಪಾಡಲು ಹಾಗು ಈಗಾಗಲೇ ಬಹುತೇಕ ರಾಜ್ಯಗಳಲ್ಲಿ ಜಾರಿಯಲ್ಲಿರುವಂತೆ, ಶಿಕ್ಷಣದ ಖಾಸಗೀಕರಣ ಮತ್ತು ವ್ಯಾಪಾರೀಕರಣವನ್ನು ಪೂರ್ಣವಾಗಿ ನಿಯಂತ್ರಿಸಿ ಖಾಸಗಿ ಶಾಲೆಗಳು ಜನಸಾಮಾನ್ಯರಿಗೆ ಹೊಣೆಗಾರಿಕೆ ಮತ್ತು ಉತ್ತರದಾಯಿತ್ವನ್ನು ಹೊಂದಿರಲು ಅನುವಾಗುವಂತೆ ಶುಲ್ಕ ನಿಯಂತ್ರಣ, ಗುಣಾತ್ಮಕ ಶಿಕ್ಷಣಕ್ಕಾಗಿ ಕನಿಷ್ಟ ಪ್ರಮಾಣಕಗಳು ಹಾಗು ಮಾನದಂಡಗಳು ಮತ್ತು ಪೋಷಕರ ಪಾಲ್ಗೊಳುವಿಕೆಗೆ ಪೂರಕವಾಗುವ ಸಾಂಸ್ಥಿಕ ರಚನೆಯನ್ನು ಒಳಗೊಂಡಿರುವ ಕಟ್ಟುನಿಟ್ಟಾದ ಸಮಗ್ರ ಕಾನೂನನ್ನು ರೂಪಿಸಿ ಜಾರಿಗೊಳಿಸಲು ನಮ್ಮ ಪಕ್ಷವು ಬದ್ಧವಾಗಿದೆ.
- ಸಾರ್ವಜನಿಕವಾಗಿ ವ್ಯಾಪಕ ಟೀಕೆಗೆ ಒಳಗಾಗಿರುವ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಸಂವಿಧಾನದ ಒಕ್ಕೂಟ ತತ್ವಗಳಿಗನುಗುಣವಾಗಿ ಪರಾಮರ್ಶಿಸಿ ರಾಜ್ಯದ ಅಗತ್ಯತೆಗೆ ಅನುಗುಣವಾಗಿ ರಾಜ್ಯ ಶಿಕ್ಷಣ ನೀತಿ (ರಾಶಿನೀ) ರೂಪಿಸಲು ನಮ್ಮ ಪಕ್ಷವು ಬದ್ಧವಾಗಿದೆ
- ಮಕ್ಕಳಿಗೆ ಕ್ಷೀರ ಭಾಗ್ಯ ಮತ್ತು ಮಧ್ಯಾಹ್ನದ ಬಿಸಿಯೂಟದ ಜೊತೆಗೆ ಬೆಳಗಿನ ಉಪಹಾರ ಯೋಜನೆಯನ್ನು ಜಾರಿಗೊಳಿಸುವುದು ಹಾಗು ರಾಜ್ಯದಲ್ಲಿ ಅಪೌಷ್ಟಿಕತೆ ತೊಡೆದು ಹಾಕಲು ಅಂಗನವಾಡಿಯಿಂದ 10 ನೇ ತರಗತಿಯ ಎಲ್ಲಾ ಮಕ್ಕಳಿಗೆ ಪ್ರತಿದಿನ ಮೊಟ್ಟೆ ವಿತರಿಸಲು ನಮ್ಮ ಪಕ್ಷವು ಬದ್ಧವಾಗಿದೆ
- ಶಾಲಾ ಹಂತದಲ್ಲಿ ಸಂವಿಧಾನ ಬದ್ಧವಾಗಿ ಕಾರ್ಯನಿರ್ವಹಿಸುತ್ತಿರುವ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳನ್ನು ಪ್ರಜಾಸತ್ತಾತ್ಮಕವಾಗಿ ರಚಿಸಿ ಬಲವರ್ಧನೆಗೊಳಿಸಲು ಪರಿಣಾಮಕಾರಿ ತರಬೇತಿ ಒದಗಿಸಲು ನಮ್ಮ ಪಕ್ಷವು ಬದ್ಧವಾಗಿದೆ.
- ಪ್ರೌಢ, ಉನ್ನತ ಪ್ರೌಢ ಹಾಗು ಉನ್ನತ ಶಿಕ್ಷಣದಲ್ಲಿ ಈಗಿನ ನಿವ್ವಳ ದಾಖಲಾತಿಯನ್ನು ಹೆಚ್ಚಿಸಲು ವಿಶೇಷ ಕಾರ್ಯಕ್ರಮಗಳನ್ನು ರೂಪಿಸಲು ನಮ್ಮ ಪಕ್ಷವು ಬದ್ಧವಾಗಿದೆ.
- ಖಾಸಗಿ ಸ್ವಾಯತ್ತ ವಿಶ್ವವಿದ್ಯಾಲಯಗಳನ್ನು ಅಣಬೆಯಂತೆ ತೆರೆಯಲು ನೀಡುವ ಅನುಮತಿಯನ್ನು ಸ್ಥಗಿತಗೊಳಿಸಿ, ಸಾರ್ವಜನಿಕ ವಿಶ್ವವಿದ್ಯಾಲಯಗಳನ್ನು ಬಲವರ್ಧನೆಗೊಳಿಸಲು ಮತ್ತು ವಿಸ್ತರಿಸಲು ಎಲ್ಲಾ ರೀತಿಯ ಕ್ರಮಗಳನ್ನು ಕೈಗೊಳ್ಳಲು ನಮ್ಮ ಪಕ್ಷವು ಬದ್ಧವಾಗಿದೆ.
- ರಾಜ್ಯ ಆಯವ್ಯಯದಲ್ಲಿ ಶಿಕ್ಷಣಕ್ಕೆ ಶೇಕಡ 15% ರಷ್ಟು ಮೀಸಲಿಡಲು ನಮ್ಮ ಪಕ್ಷವು ಕಟಿಬದ್ಧವಾಗಿದೆ.
- ಶಿಕ್ಷಣಕ್ಕೆ ಸಂಬಂಧಿಸಿದಂತೆ ಶಿಕ್ಷಣ ವ್ಯವಸ್ಥೆಯ ಮಹತ್ವವನ್ನು ಅರಿತು, ಅದನ್ನು ಸಂವಿಧಾನದ ಮೌಲ್ಯಗಳಿಗೆ ಅನುಗುಣವಾಗಿ ಹಾಗು ಪ್ರಜಾಸತ್ತಾತ್ಮಕವಾಗಿ ಮುನ್ನೆಡಸಬಲ್ಲ ಯೋಗ್ಯರನ್ನು ಮಾತ್ರವೇ ಸಚಿವರನ್ನಾಗಿ ಆಯ್ಕೆ ಮಾಡಲು/ನೇಮಿಸಲು ನಮ್ಮ ಪಕ್ಷವು ಬದ್ಧವಾಗಿದೆ.

ಈ ಮೇಲಿನ ಎಲ್ಲಾ ಅಂಶಗಳನ್ನು ತಮ್ಮ ಪ್ರಣಾಳಿಕೆಯಲ್ಲಿ ಜನರ ಕಾರ್ಯಸೂಚಿಯನ್ನಾಗಿ ಸೇರಿಸಲು ನಾವು ಶಿಕ್ಷಣದ ಮೂಲಭೂತ ಹಕ್ಕಿಗಾಗಿ ಜನಾಂದೋಲನಗಳ ಸಮನ್ವಯದ ಪರವಾಗಿ ಆಗ್ರಹಪೂರ್ವಕವಾಗಿ ಒತ್ತಾಯಿಸುತ್ತೇವೆ.

1. **ನಿರಂಜನಾರಾಧ್ಯ ವಿ.ಪಿ** (ಶಿಕ್ಷಣದ ಮೂಲಭೂತ ಹಕ್ಕಿಗಾಗಿ ಜನಾಂದೋಲನಗಳ ಸಮನ್ವಯ)
2. **ಮಾವಳ್ಳಿ ಶಂಕರ** (ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ)
3. **ಬಸವರಾಜ ಗುರಿಕಾರ** (ಅಖಿಲ ಭಾರತ ಪ್ರಾಥಮಿಕ ಶಿಕ್ಷಕರ ಒಕ್ಕೂಟ)
4. **ಚಂದ್ರಶೇಖರ ನುಗ್ಲಿ** (ಕರ್ನಾಟಕರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ)
5. **ಅವರಗೆರೆ ಚಂದ್ರು** (ಕರ್ನಾಟಕ ಬಿಸಿಯೂಟ ನೌಕರರ ಸಂಘ)
6. **ಎಂ.ಜಯಮ್ಮ** (ಕರ್ನಾಟಕ ರಾಜ್ಯ ಅಂಗನವಾಡಿ ಕಾರ್ಯಕರ್ತೆಯರ ಮತ್ತು ಸಹಾಯಕಿಯರ ಫೆಡರೇಶನ್)
7. **ಶಾಂತಿ/ಮೊಯ್ಯುದ್ದೀನ್ ಕುಟ್ಟಿ/ಉಮೇಶ್ ದೊಡ್ಡಗಂಗವಾಡಿ/ಅಶೋಕ್ ಮಾಗಡಿ/ಅಬ್ದುಲ್ ಸಲಾಂ ಚಿತ್ತೂರು/ ಮಾಥ್ಯು ಮುನಿಯಪ್ಪ ಹಾಗು ಎಲ್ಲಾ ಜಿಲ್ಲಾಧ್ಯಕ್ಷರು/ಕಾರ್ಯದರ್ಶಿಗಳು**
   (ಕರ್ನಾಟಕರಾಜ್ಯ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳ ಸಮನ್ವಯ ವೇದಿಕೆ)
8. **ಬಿ.ಎನ್. ಯೋಗಾನಂದ** (ಕರ್ನಾಟಕ ರಾಜ್ಯ ಶಾಲಾ ಕಾಲೇಜುಗಳ ಪೋಷಕರ ಸಂಘಟನೆಗಳ ಸಮನ್ವಯ ವೇದಿಕೆ)
9. **ಮಲ್ಲಿಗೆ** (ಸಮಾನ ಶಿಕ್ಷಣಕ್ಕಾಗಿ ಜನಾಂದೋಲನ ಹಾಗು ಕರ್ನಾಟಕ ಜನಶಕ್ತಿ)
10. **ಶಶಾಂಕ ಎಸ್.ಆರ್** (ಶಿಕ್ಷಣದ ಮೂಲಭೂತ ಹಕ್ಕಿಗಾಗಿ ಅಖಿಲ ಭಾರತ ವೇದಿಕೆ)
11. **ವಿನಯ್ ಶ್ರೀನಿವಾಸ** (ಬಹುತ್ವ ಕರ್ನಾಟಕ )
12. **ಲೋಕೇಶ್ ತಾಳೀಕಟ್ಟೆ** (ಗ್ರಾಮೀಣ ಖಾಸಗಿ ಅನುದಾನರಹಿತ ಶಾಲೆಗಳ ಒಕ್ಕೂಟ(ರೂಪ್ಸ)
13. **ಸರಸ್ವತಿ** (ಬಾಲ ಕಾರ್ಮಿಕ ಪದ್ಧತಿ ವಿರೋಧಿ ಆಂದೋಲನ)
14. **ಬಾಬು ಮಾಥ್ಯು** (ಸಾರ್ವಜನಿಕ ನೀತಿ ನಿರೂಪಣಾ ಸಂಸ್ಥೆ, ಎನ್ಎಲ್ಎಸ್ಐಯು)
15. **ಜೀಶಾನ್ ಅಖಿಲ್ ಸಿದ್ದಿಕಿ** (ಸ್ಟೂಡೆಂಟ್ಸ್ ಇಸ್ಲಾಮಿಕ್ ಆರ್ಗನೈಝೇಶನ್ ಆಫ್ ಇಂಡಿಯಾ)
16. **ಸರೋವರ ಬೆಂಕೀಕೆರೆ** (ಕರ್ನಾಟಕ ವಿದ್ಯಾರ್ಥಿ ಸಂಘಟನೆ)
17. **ಶುಭಂಕರ್ ಚಕ್ರವರ್ತಿ** (ಭಾರತಜ್ಞಾನ ವಿಜ್ಞಾನ ಸಮಿತಿ)
18. **ಗುರುಮೂರ್ತಿ ಕಾಶೀನಾಥ್** (ಐಟಿ ಫಾರ್ ಚೇಂಜ್)
19. **ಕಿರಣ ಕಮಲ ಪ್ರಸಾದ** (ಜೀವಿಕ–ಜೀತ ವಿಮುಕ್ತಿ ಕರ್ನಾಟಕ)
20. **ಮಹದೇವ ಹೆಗ್ಗಡದೇವನ ಕೋಟೆ** (ಕರ್ನಾಟಕ ಜೀತದಾಳು ಮತ್ತು ಕೃಷಿ ಕಾರ್ಮಿಕರ ಒಕ್ಕೂಟ)
21. **ಗಂಗಾಧರ** (ಸಮ ಸಮಾಜಕ್ಕಾಗಿ ಗೆಳೆಯರ ಬಳಗ)
22. **ವೈ. ಮರಿಸ್ವಾಮಿ** (ಸಾಮಾಜಿಕ ಪರಿವರ್ತನಾ ಜನಾಂದೋಲನ)
23. **ತಿರುಮಲರಾವ್** (ಕರ್ನಾಟಕರಾಜ್ಯ ನಿವೃತ್ತ ಶಿಕ್ಷಣಾಧಿಕಾರಿಗಳ ಸಂಘ)
24. **ಆರ. ನಾಗೇಶ್ ಅರಳಕುಪ್ಪೆ** (ಅಖಿಲ ಕರ್ನಾಟಕ ವಿಚಾರವಾದಿ ಟ್ರಸ್ಟ್)
25. **ಎನ್. ವಿ. ಮಂಜುಳ** (ಕರ್ನಾಟಕ ಆದಿವಾಸಿ ಸೋಲಿಗರ ಬುಡಕಟ್ಟು ಮಹಾಸಭಾ (ರಿ)
26. **ಕುಮಾರ ಸ್ವಾಮಿ** (ಮಗು ಮತ್ತು ಕಾನೂನು ಕೇಂದ್ರ, ಎನ್ ಎಲ್ ಎಸ್ ಐ ಯು, ಬೆಂಗಳೂರು)
27. **ಜಿ.ರವಿ** (ಫೋರ್ತ್ ವೇವ್ ಫೌಂಡೇಶನ್)
28. **ಅರತ್ರಿಕಾ** (ಅಖಿಲ ಭಾರತ ವಿದ್ಯಾರ್ಥಿ ಸಂಘಟನೆ)
29. **ಸುಧಾ .ಎಸ್** (ಇ.ಎಫ್.ಎಸ್.ಎ)